**ಓ ಎಸ್ ನಂ:233/2019**

**ಪಿ. ಡಬ್ಲ್ಯೂ : 2**

**ದಿ: 16.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಂ ಆರ್ ಆರ್ ವಕೀಲರಿಂದ:**

ದಿನಾಂಕ: 25.11.2005 ರಲ್ಲಿ ಆದ ಕ್ರಯಪತ್ರ ಹಾಗೂ 2008 ರಲ್ಲಿ ರಜನಿ ಇವರಿಗೆ ಆದ ಕ್ರಯಪತ್ರದ ಬಗ್ಗೆ ನನಗೆ ಗೊತ್ತಿದೆ. ಆ ಎರಡು ಸ್ವತ್ತುಗಳು ನಮ್ಮ ತಾಯಿ ಭಾಗಕ್ಕೆ ಬಂದ ಸ್ವತ್ತುಗಳು ಎಂದರೆ ಸರಿಯಲ್ಲ ಜೊತೆಯಲ್ಲಿಯೇ ಇದ್ದು ಜೊತೆಯಲ್ಲಿಯೇ ಮಾರಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. **ಸಾಕ್ಷಿ ದಿನಾಂಕ: 25.11.2005 ರಲ್ಲಿ ಆದ ಕ್ರಯಪತ್ರವನ್ನು ಒಪ್ಪಿಕೊಂಡಿದ್ದು ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು.** ಅದರಲ್ಲಿ ಲಕ್ಷ್ಮಮ್ಮ ಮತ್ತು ಸರೋಜಮ್ಮ ಹೆಬ್ಬೆಟ್ಟು ಹಾಕಿದ್ದಾರೆ ಮತ್ತು ಗಂಗಮ್ಮ ಸಹಿ ಮಾಡಿದ್ದಾರೆ ಎಂದರೆ ಸರಿ. ನಮ್ಮ ತಾಯಿ ಮತ್ತು 1ನೆ ಪ್ರತಿವಾದಿ ಮದುವೆಯಾದಾಗಿನಿಂದ ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಇಬ್ಬರಿಗೂ ರೇಷನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ಗಳು ಬೇರೆ ಬೇರೆ ಇವೆ ಎಂದರೆ ಸರಿ. ಅವರವರ ವ್ಯವಹಾರಗಳನ್ನು ಪ್ರತ್ಯೇಕವಾಗಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

ದಿನಾಂಕ: 10.04.1992 ರಲ್ಲಿ ವಿಭಾಗಪತ್ರ ಆಗಿ ಅದರ ಪ್ರಕಾರ ನನ್ನ ತಾಯಿ ಮತ್ತು ಗಂಗಮ್ಮ ಸ್ವತ್ತುಗಳನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸ.ನಂ. 12/2 ರ ಆರ್ ಟಿ ಸಿ ಯಲ್ಲಿ ಸರೋಜಮ್ಮ ಮತ್ತು ಗಂಗಮ್ಮ ಇವರ ಹೆಸರು ಜಂಟಿಯಾಗಿ ಬರುತ್ತಿದೆ ಎಂದರೆ ಸರಿ. ಆರ್ ಟಿ ಸಿ ಯಲ್ಲಿ ವಿಭಜನೆ ಎಂದು ಬರೆದಿರುಬಹುದು ಆದರೆ ಯಾವುದೆ ಭಾಗ ಆಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 35/1 ರಲ್ಲಿ 2 ಎಕರೆ 1ವರೆ ಗುಂಟೆ ಇದು ಗಂಗಮ್ಮ ಇವರ ಹೆಸರಿನಲ್ಲಿ ಆರ್ ಟಿ ಸಿ ಬರುತ್ತಿದೆ ಎಂದರೆ ಸರಿ. ಆದರೆ ಅದರಲ್ಲಿ ಬರೆದ ರೀತಿ ಯಾವುದ ವಿಭಜನೆ ಆಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿ ಪಿ 15 ರಲ್ಲಿ ವಿಭಜನೆ ಎಂದು ಬರೆದಿದೆ ಎಂದರೆ ಸರಿ. ಆದರೆ ಆ ರೀತಿ ಭಾಗ ಆಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಈ ರೀತಿ ಆರ್ ಟಿ ಸಿ ಗಳು ಆಗಿದ್ದನ್ನು ಪ್ರಶ್ನಿಸಿ ನಾವು ಮೇಲ್ಮನವಿ ಮಾಡಿಲ್ಲ.

ಸ.ನಂ. 12/2 ರ ಮೊದಲಿನ ಸ.ನಂ. 11 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಿಭಾಗಪತ್ರದ ಪ್ರಕಾರ ನಮ್ಮ ತಾಯಿಗೆ 1 ಎಕರೆ ಬಂದಿದೆ ಮತ್ತು 7 ಗುಂಟೆ ಪ್ರತಿವಾದಿಗೆ ಬಂದಿದೆ ಎಂದರೆ

ಸರಿಯಲ್ಲ. ಈಗ ಅವೆರಡು ಜಂಟಿಯಲ್ಲಿವೆ ಎಂದರೆ ಸರಿ. ದಾವಾ ಐಟಂ ನಂಬರ್ 2 ನ್ನು 1 ನೆ ಪ್ರತಿವಾದಿಯು ತನ್ನ ಮಕ್ಕಳಿಗೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಆದರೆ ಯಾವುದೆ ಭಾಗ ಆಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಈಗ ಪಹಣಿ ಅವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸಾಕ್ಷಿ ಸೃಷ್ಟಿ ಮಾಡಿಕೊಂಡಿರಬಹುದು ಎಂದು ಹೇಳುತ್ತಾರೆ. ಐಟಂ ನಂಬರ್ 3 ವಿಭಾಗಪತ್ರದ ಮೂಲಕ 2 ಎಕರೆ 1 ವರೆ ಗುಂಟೆ ಗಂಗಮ್ಮನಿಗೆ ಹೋಗಿದೆ ಎಂದರೆ ಸರಿಯಲ್ಲ. ಅವರು ಖಾತೆ ಮಾಡಿಸಿಕೊಂಡಿರಬಹುದು ಎಂದು ಸಾಕ್ಷಿ ಹೇಳುತ್ತಾರೆ.

ಐಟಂ ನಂಬರ್ 4 ರಲ್ಲಿ 1 ಎಕರೆ 20 ಗುಂಟೆ ನಮ್ಮ ತಾಯಿಗೆ ಬಂದಿದೆ ಗಂಗಮ್ಮನಿಗೆ 19 ಗುಂಟೆ ಹೋಗಿದೆ ಎಂದರೆ ಸರಿಯಲ್ಲ. ನಮ್ಮ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಈ ಎಲ್ಲ ವಿಷಯಗಳು ಗೊತ್ತಾಗುತ್ತದೆ ಎನ್ನುವ ಕಾರಣಕ್ಕೆ ಅವರಿಂದ ಅಧಿಕಾರ ಪತ್ರ ಪಡೆದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗಪತ್ರದ ಪ್ರಕಾರ ವಾದಿ ಮತ್ತು 1 ನೆ ಪ್ರತಿವಾದಿಯು ದಾವಾ ಸ್ವತ್ತುಗಳನ್ನು ಪ್ರತ್ಯೇಕವಾಗಿ ಸ್ವಾಧೀನ ಹೊಂದಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. 2019 ರಲ್ಲಿ ಮೇ ನಲ್ಲಿ ಭಾಗ ಕೊಡಿ ಎಂದು ಪ್ರತಿವಾದಿಗಳಿಗೆ ಕೇಳಿದ್ದೇವೆ. ಆದರೆ ನೋಟೀಸ್ ಕೊಟ್ಟಿಲ್ಲ. ಭಾಗ ಕೇಳಿದಾಗ ಪಂಚಾಯಿತಿ ಮಾಡಿಲ್ಲ. ಯಾವ ದಿವಸ ನಮ್ಮ ತಾಯಿ 1 ನೆ ಪ್ರತಿವಾದಿಯನ್ನು ಭಾಗ ಕೇಳಿದ್ದಳು ಎಂದು ವಾದಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಗಳ ಮದ್ಯೆ ಒಟ್ಟು ಕುಟುಂಬ ಅಸ್ತಿತ್ವದಲ್ಲಿಲ್ಲ ಮತ್ತು ಜಂಟಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಆಸ್ತಿಗಳು ಈಗಾಗಲೇ ಭಾಗವಾಗಿರುವುದರಿಂದ ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವಿಭಾಗಪತ್ರದಲ್ಲಿ ನಮ್ಮ ತಂದೆ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಮಹೇಶಯ್ಯ ಹೆಬ್ಬೆಟ್ಟು ಹಾಕುತ್ತಾರೆಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಅದಕ್ಕ ಭೀಮಯ್ಯ ಇವರು ಸಾಕ್ಷಿ ಹಾಕಿದ್ದಾರೆ ಮತ್ತು ಕೆ ಎಂ ಶಿವಣ್ಣ ಇವರು ಪತ್ರ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ : ಇಲ್ಲ**

(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ ಎ ಓ**

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.